ಅಲ್ಲಿ ಕಥಾನಾಯಕ ತನ್ನ ನೆನಪನ್ನು ಕಳೆದುಕೊಂಡುಬಿಟ್ಟಿದ್ದಾನೆ. ಅದನ್ನು ಮತ್ತೆ ಪಡೆಯಲು ಅವನು ತನ್ನ ಬಾಲ್ಯ ಮತ್ತು ಕಿಶೋರಾವಸ್ಥೆಯ ಸಮಯವನ್ನು ಮತ್ತೆ ಜೀವಿಸಬೇಕು. ಹಾಗೆ ಜೀವಿಸಬೇಕಾದರೆ ಆ ಕಾಲದ ವಾರ್ತಾಪತ್ರಿಕೆಗಳನ್ನೂ ಪುಸ್ತಕಗಳನ್ನೂ ವ್ಯಂಗ್ಯಚಿತ್ರಗಳನ್ನೂ ಕಾಮಿಕ್ ಪುಸ್ತಕಗಳನ್ನೂ ಓದಬೇಕು. ಒಂದು ಮಟ್ಟದಲ್ಲಿ ಅದು ಸಮಕಾಲೀನ ಓದು. ಅದೇ ಕಾಲಕ್ಕೆ ಅದು ಚರಿತ್ರೆಯ ವರ್ತಮಾನವೂ ಆಗಿರುತ್ತದೆ. ಅದನ್ನು ಓದುತ್ತಿರುವಾಗ ನಾಯಕನಿಗೆ ಅಂದಿನ ಸಾಹಿತ್ಯದಲ್ಲಿರುವ ಪೂರ್ವಗ್ರಹಗಳು ಮತ್ತು ಸಂವೇದನಾರಾಹಿತ್ಯ ಕಾಣುತ್ತದೆ. ಬಹುಶಃ ಆಗಿನ ಸಂದರ್ಭಕ್ಕೆ ಅದು ಒಪ್ಪಿತವಾಗಿತ್ತೇನೋ? ಹೀಗೆ ನಾವು ವರ್ತಮಾನದಲ್ಲಿ ಚರಿತ್ರೆಯನ್ನು ಮತ್ತೆ ಜೀವಿಸಿದಾಗ ನಮಗೆ ಕಾಣುವ ಚಿತ್ರವೇ ಬೇರೆಯಾದದ್ದು.

ಈ ವಿಷಯವನ್ನು ಉಲ್ಲೇಖಿಸಲು ಕನ್ನಡದ್ದೇ ಉದಾಹರಣೆಯನ್ನು ನಾವು ಕೊಡಬಹುದು. ನನ್ನ ಬಾಲ್ಯಕಾಲದಲ್ಲಿ ಕೈಲಾಸಂ ಸಾಹಿತ್ಯ – ಮುಖ್ಯವಾಗಿ ಅವರ ನಾಟಕಗಳು – ಹಾಸ್ಯಸಾಹಿತ್ಯದಲ್ಲಿ ಒಂದು ಮಹತ್ವದ ಜಾಗವನ್ನು ಪಡೆದಿದ್ದವು. ‘ಕನ್ನಡಕ್ಕೊಬ್ಬರೇ ಕೈಲಾಸಂ’ ಎಂದು ಅವರನ್ನು ಗೌರವದಿಂದ ಕಾಣಲಾಗುತ್ತಿತ್ತು. ಇಂದಿನ ಸಂದರ್ಭದಲ್ಲಿ ಆ ಸಾಹಿತ್ಯವನ್ನು ಓದಿ, ಅದರಲ್ಲಿರುವ ಜಾತಿವಾದ, ಉಪಜಾತಿವಾದ, ಪೂರ್ವಗ್ರಹ, ಸ್ಟೀರಿಯೋಟೈಪಿಂಗ್‌ಗಳನ್ನು ವಿಶ್ಲೇಷಿಸಿದರೆ ಅದು ಸಂವೇದನಾಹೀನ ಸಾಹಿತ್ಯ ಅನ್ನಿಸಬಹುದು. ಅಂಬೇಡ್ಕರ್ ಬಗೆಗಿನ ವ್ಯಂಗ್ಯಚಿತ್ರಗಳಲ್ಲೂ ಆಗ ಹಾಸ್ಯವೆಂದು ಒಪ್ಪಿತವಾದ ಮಾನದಂಡಗಳು ಇಂದಿನ ಮಾನದಂಡಗಳಿಗಿಂತ ಭಿನ್ನವಾಗಿದ್ದವೇ ಎನ್ನುವ ವಿಚಾರವನ್ನು ಮಥಿಸಬೇಕು. ಯಾವುದೇನೇ ಆದರೂ ಈ ಪುಸ್ತಕವನ್ನು ಓದಿದಾಗ ಎನ್.ಸಿ.ಇ.ಆರ್.ಟಿ. ಹೊರತಂದ ಪುಸ್ತಕದಲ್ಲಿದ್ದ ಶಂಕರ್ ಅವರ ವ್ಯಂಗ್ಯಚಿತ್ರ ಒಂದು ಬಿಡಿ ವ್ಯಂಗ್ಯಚಿತ್ರವಾಗಿ ಕಾಣದೇ, ಅಂಬೇಡ್ಕರ್ ಬಗ್ಗೆ ಹಲವು ವ್ಯಂಗ್ಯಚಿತ್ರಕಾರರಿಗಿದ್ದ ಪೂರ್ವಗ್ರಹ ಪೀಡಿತ ಅಭಿಪ್ರಾಯವನ್ನೂ ಕಾಣಿಸುತ್ತದೆ. ಅತ್ಯದ್ಭುತವಾದ ವ್ಯಂಗ್ಯಚಿತ್ರಕಾರರೆಂದು ಖ್ಯಾತಿ ಪಡೆದಿದ್ದ ಶಂಕರ್ ಅವರ ಪೂರ್ವಗ್ರಹ ಪೀಡಿತ ವ್ಯಂಗ್ಯಚಿತ್ರಗಳು ಈ ಸಂಕಲನದಲ್ಲಿ ಅಧಿಕ ಸಂಖ್ಯೆಯಲ್ಲಿವೆ.




ಗಾಂಧಿಯ ವ್ಯಂಗ್ಯಚಿತ್ರಗಳ ಪುಸ್ತಕದಲ್ಲಿ ಯಾವುದೇ ಟಿಪ್ಪಣಿಗಳಿಲ್ಲ. ಗಾಂಧಿಯನ್ನು ಅಪಮಾನಗೊಳಿಸಿರಬಹುದು ಎನ್ನುವ ಟೀಕೆಯಿಲ್ಲ. ಒಂದು ರೀತಿಯಲ್ಲಿ ಸದಭಿರುಚಿಯ ಹಾಸ್ಯ ಗಾಂಧಿಯ ಬಗೆಗಿದ್ದರೂ ಅದನ್ನು ಅರಗಿಸಿಕೊಂಡು ಎತ್ತರದಲ್ಲಿ ನಿಲ್ಲಲು ಗಾಂಧಿಗೆ ಸಾಧ್ಯ ಎನ್ನುವ ವಿಚಾರವನ್ನು ಪ್ರತಿಪಾದಿಸುವ ಆತ್ಮವಿಶ್ವಾಸದಿಂದ ಆ ಪುಸ್ತಕವಿದೆ. ಆದರೆ, ಅಂಬೇಡ್ಕರ್ ಪುಸ್ತಕದಲ್ಲಿ ಆ ಆತ್ಮವಿಶ್ವಾಸವಿಲ್ಲವೇ? ಇದು ಸ್ವಲ್ಪ ಕಠಿಣವಾದ ಪ್ರಶ್ನೆ. ನಮ್ಮ ಸಮಾಜದ ವರ್ಗವ್ಯವಸ್ಥೆಯಲ್ಲಿ ಗಾಂಧಿ ತುಂಡು ಪಂಚೆ ಮತ್ತು ಬರಿಯೆದೆಯ ಮೇಲಿನ ಅಂಗವಸ್ತ್ರವನ್ನು ಧರಿಸಿ ನಡೆದರೆ ಅದು ತನ್ನ ಸಹಜ ಸವಲತ್ತನ್ನು ಬಿಟ್ಟುಕೊಟ್ಟು ಜನಸಾಮಾನ್ಯರೊಡನೆ ಬೆರೆತು ನಿಲ್ಲುವ, ರೈಲಿನ ಮೂರನೆಯ